sdmimd

## Kannada Prabha

Date: 29-01-2021 | Page No: 04

Edition: Mysore | Language: Kannada

# ಎಸ್‌ಡಿಎಂ ಐಎಂಡಿಯ ವಾರ್ಷಿಕ ಘಟಿಕೋತ್ಸವ

ಮೈಸೂರು: ಎಸ್‌ಡಿಎಂ ಐಎಂಡಿಯ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯಿಂದ ಒಂದು ವರ್ಷ ಪೂರ್ಣಾವಧಿಯ ಸ್ನಾತಕೋತ್ತರ ಪ್ರಮಾಣ ಪತ್ರ ವಿತರಣೆ ಕಾರ್ಯಕ್ರಮವು ವರ್ಚುವಲ್ ಮೂಲಕ ನಡೆಯಿತು.

ಘಟಿಕೋತ್ಸವದ ಅಧ್ಯಕ್ಷತೆವಹಿಸಿದ್ದ ಎಸ್‌ಡಿಎಂ ಐಎಂಡಿ ಅಧ್ಯಕ್ಷ ಡಾ.ಡಿ. ವೀರೇಂದ್ರ ಹೆಗ್ಗಡೆ ಅವರು, ಎಐಸಿಟಿ ಅನುಮೋದಿತ 2020-2021ನೇ ಬ್ಯಾಚ್‌ನ 11 ಮಂದಿ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಸರ್ಟಿಫಿಕೇಟ್ ಇನ್ ಮ್ಯಾನೇಜ್‌ಮೆಂಟ್ ನೀಡಿದರು. ಮತ್ತು ಭಾರ್ಗವಿ ಉಪಾದ್ಯಾಯ ಅವರಿಗೆ ಒಟ್ಟಾರೆ ಅತ್ಯುತ್ತಮ ಸಾಧನೆಗಾಗಿ ಚಿನ್ನದ ಪದಕ ನೀಡಲಾಯಿತು.

ಡಾ. ವೀರೇಂದ್ರ ಹೆಗಡೆ ಅವರು ಮಾತನಾಡಿ, ಸಂಸ್ಥೆಯ ವಿದ್ಯಾರ್ಥಿಗಳಲ್ಲಿ ಒಟ್ಟಾರೆ ವ್ಯಕ್ತಿತ್ವ ಮತ್ತು ಪಾತ್ರ ಬೆಳೆಸಲು ಶ್ರಮಿಸುತ್ತಿದೆ. ವಿದ್ಯಾರ್ಥಿಗಳು ತಮ್ಮ ಸಾಂಸ್ಥಿಕ ಅಥವಾ ಸ್ವಂತ ಉದ್ಯಮಗಳಲ್ಲಿ ಉತ್ತಮ ಸಾಧನೆ ತೋರಬೇಕು. ಏಕಕಾಲದಲ್ಲಿ ಉನ್ನತ ಭಾರತೀಯ ಮೌಲ್ಯಗಳು ಮತ್ತು ನೀತಿಗಳನ್ನು ಹಿಡಿದಿಟ್ಟುಕೊಳ್ಳಬೇಕು ಎಂಬುದು ಅವರ ಆಸೆ ಎಂದರು. ಉನ್ನತ ಶಿಕ್ಷಣದ ಬದಲಾಗುತ್ತಿರುವ ದೃಷ್ಟಿಕೋನ ಕುರಿತು ಮಾತನಾಡುತ್ತ, ಹೊಸ ಶಿಕ್ಷಣ ನೀತಿಯು ಹಲವಾರು ಮೂಲ ಸಿದ್ಧಾಂತಗಳನ್ನು ಹೊಂದಿದೆ. ಇದನ್ನು ಶಿಕ್ಷಣಕ್ಕೆ ಧರ್ಮಸ್ಥಳ ಸಂಸ್ಥೆಗಳ ಸಮೂಹ ಅನುಸರಿಸುತ್ತ ಬಂದಿದೆ ಎಂದರು. ಸಂಸ್ಥೆಯ ನಿರ್ದೇಶಕ ಡಾ.ಎನ್.ಆರ್. ಪರಶುರಾಮ ವಿಷಯ ಮಂಡಿಸಿದರು. ಉಪನಿರ್ದೇಶಕ ಡಾ.ಎಚ್. ಗಾಯಿತ್ರಿ ಸ್ವಾಗತಿಸಿದರು.